ಮಾನ್ಯ ಕೆ.ಹೆಚ್. ಪಾಟೀಲರು ಪತ್ರ ಬರೆದಿದ್ದಾರೆಯೇ? ಬರೆದಿದ್ದರೆ ಯಾವ ಭಾಷೆಯಲ್ಲಿ ಬರೆದಿದ್ದಾರೆ, ರಾಮಕೃಷ್ಣ ಹೆಗಡೆಯವರು ಪತ್ರ ಬರೆದಿದ್ದರೆ ಯಾವ ಭಾಷೆಯಲ್ಲಿ ಬರೆದಿದ್ದಾರೆ, ಬಸವಲಿಂಗಪ್ಪನವರು ಪತ್ರ ಬರೆದಿದ್ದರೆ ಏನು ಬರೆದಿದ್ದಾರೆ, ಇಂಗ್ಲೀಷ್‌ನಲ್ಲಿ ಬರೆದಿದ್ದಾರೋ ಕನ್ನಡದಲ್ಲಿ ಬರೆದಿದ್ದಾರೋ ಎಂದು ಕೇಳುವುದು. ಆ ನಂತರ ನಮಗೆ ಸೂಚನೆ ನೀಡುವುದು. ಇದೆಲ್ಲಾ ಆದ ಮೇಲೆ ನಾನು ಇಂಗ್ಲೀಷಿನಲ್ಲೇ ಬರೆಯುವುದಕ್ಕೆ ಪತ್ತಿದ್ದೇನೆ. ಇಂತಹ ಅವಿವೇಕತನಕ್ಕೆ ಅವಕಾಶ ಕೊಡಬಾರದು, ಇವರು ಒಂದಿನ ತಿಂಗಳು ಪೇಪರ್ ಅಡ್ವೈರ್‌ಟೈಸ್‌ಮೆಂಟ್‌ಗೆ ಲಕ್ಷಗಟ್ಟಲೆ ಹಣವನ್ನು ತೆಗೆದುಕೊಂಡಿದ್ದಾರೆ. ಅದು ನಿಮ್ಮ ಗಮನಕ್ಕೆ ಬಂದಿದೆಯೇ? ಇದು ಕರಪ್‌ಷನ್ ಅಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಪೇಪರ್‌ಗೆ ಆಡ್‌ವರ್‌ಟೈಸ್ ಏನು ಹಣ ತೆಗೆದುಕೊಂಡಿದ್ದಾರೆಂದಿದ್ದಾರೆ ಆ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಸಂತೋಷದಿಂದ ಉತ್ತರ ಕೊಡುತ್ತೇನೆ. ಆದರೆ ಅವರಿಗೆ ಕೊಟ್ಟಿರತಕ್ಕ ಜವಾಬ್ದಾರಿ ಏನೆಂಬುದನ್ನು ಮತ್ತೊಮ್ಮೆ ಓದುತ್ತೇನೆ.

''ಸರ್ಕಾರದ ರಾಜ್ಯಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟು ನಿಟ್ಟಾಗಿ ಪ್ರಯತ್ನಿಸಿರುವುದೇ?''

ಇವರು ಡಿ.ಸಿ.ಯವರ ಹತ್ತಿರ ಹೋಗಿ ನಿಮಗೆ ಡೈರೆಕ್ಟರ್‌ರವರಿಂದ, ಕಮಿಷನರ್‌ರವರಿಂದ ಅಥವಾ ಸೆಕ್ರೆಟರಿಗಳವರಿಂದ ಪತ್ರಗಳು ಬಂದಿದ್ದರೆ ಅವು ಕನ್ನಡದಲ್ಲಿ ಬಂದಿವೆಯೋ ಅಥವಾ ಇಂಗ್ಲೀಷಿನಲ್ಲಿ ಬರುತ್ತಿವೆಯೋ ಎಂದು ಕೇಳಿದರೆ ತಪ್ಪು ಏನು? ಅಥವಾ ಮಾನ್ಯ ಕೆ.ಹೆಚ್. ಪಾಟೀಲರು ಸ್ವತಂತ್ರರು, ಅವರು ಯಾವ ಭಾಷೆಯಲ್ಲಿ ಬೇಕಾದರೂ ಪತ್ರ ವ್ಯವಹಾರ ಮಾಡಲಿ ಅದಕ್ಕೆ ನಮ್ಮ ಆಕ್ಷೇಪ ಇಲ್ಲ. ಶ್ರೀ ಮಾನ್ ಕೆ. ಹೆಚ್. ಪಾಟೀಲರು ಸರ್ಕಾರಿ ನೌಕರರೇನು? ಅಲ್ಲ. ಆದರೆ ಸರ್ಕಾರಿ ನೌಕರರ ಕರ್ತವ್ಯ ಇವತ್ತು ಏನು ಎಂದರೆ ಸರ್ಕಾರದ ನಿರ್ಣಯವನ್ನು ಜಾರಿಗೆ ತರುವುದು. ಕನ್ನಡ ರಾಜ್ಯಭಾಷೆ ಆಗಬೇಕು, ಸರ್ಕಾರಿ ಭಾಷೆಯಾಗಬೇಕು ಎಂಬುದು ನಮ್ಮ ನಿರ್ಣಯ. ಅದು ಜಾರಿಗೆ ಬಂದಿದೆಯೇ ಎಂಬುದನ್ನು ಕಂಡುಹಿಡಿಯುತಕ್ಕಂತಹ ಜವಾಬ್ದಾರಿ ಈ ಸಮಿತಿಗೆ ಇದೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ,.....

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಬಸವಲಿಂಗಪ್ಪನವರು ಅವರ ಸರ್ಕಾರ ಇದ್ದಂತಹ ಕಾಲದಲ್ಲಿ ಕನ್ನಡ ರಾಜ್ಯಭಾಷೆಯನ್ನಾಗಿ ಮಾಡಲಾಗಲಿಲ್ಲ. ಈಗ ಜನತಾ ಸರ್ಕಾರ ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಿರುವುದಕ್ಕೆ ಸಹಿಸಿಕೊಳ್ಳಲಾರದೆ ಇದು ಸರಿಯಲ್ಲ. ತಾವು ಅವಕಾಶ ಕೊಡಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ?

ಅಧ್ಯಕ್ಷರು.—ಇಲ್ಲ, ಇಲ್ಲ.

ಕೆ.ಜಿ.ಎಫ್.ನಲ್ಲಿ ಮುದ್ರಿಸಲಾದ ಖೋಟಾ ನೋಟುಗಳು

೧೪೨ (೩೦೦ ಬಿ) ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್.).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೆ.ಜಿ.ಎಫ್.ನಲ್ಲಿ ಖೋಟಾ ನೋಟು ಮುದ್ರಣದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ?

ಆ) ಹಾಗಿದ್ದ ಪಕ್ಷದಲ್ಲಿ ಅದರ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿ?

ಇ) ಈ ಸಂಬಂಧದಲ್ಲಿ ಆಪಾದಿತರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ? ಹಾಗೂ ಅಪರಾಧಿಗಳ ಹೆಸರು, ವಿಳಾಸ ನೀಡುವುದು?

ಈ) ಈ ಕೇಸಿನ ತನಿಖೆಯು ಬೇರೆ ರಾಜ್ಯಕ್ಕೂ ಸಂಬಂಧಿಸಿರುವುದರಿಂದ ಮುಂದಿನ ತನಿಖೆಯನ್ನು ಸಿ.ಬಿ.ಐ.ಗೆ ಒಪ್ಪಿಸಿಕೊಡಬಹುದೆ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು),—

ಅ) ಬಂದಿದೆ.

ಆ) ದಿನಾಂಕ ೪-೧೨-೮೬ರಂದು ಬೆಳಿಗಿನ ಜಾವ ೪ ಗಂಟೆಗೆ ಸೂರ್ಯ ಆಫ್‌ಸೆಟ್ ಮುದ್ರಣಾಲಯವನ್ನು ಕೆ.ಜಿ.ಎಫ್.ನ ಪೋಲೀಸ್ ಸೂಪರಿಂಟೆಂಡೆಂಟ್ ಶೋಧಿಸಿದಾಗ ೧೦೦ ರೂ.ನ ಖೋಟಾ ನೋಟುಗಳನ್ನು ಮುದ್ರಿಸುತ್ತಿದ್ದುದು ಕಂಡು ಬಂದಿತು. ಪೋಲೀಸಿನವರು ಆಲ್ಲಿದ್ದ ಉಪಕರಣ ಯಂತ್ರಗಳನ್ನು ಹಾಗೂ ೬೪೦ ಅರ್ಧ ಮುದ್ರಿತವಾದ ಹಾಳೆಗಳನ್ನು ವಶಪಡಿಸಿಕೊಂಡಿದ್ದಾರೆ.

ಇ) ಆಂಡರ್‌ಸನ್ ಪೇಟೆಯ ಪೋಲೀಸ್ ಠಾಣೆಯಲ್ಲಿ ಭಾರತ ದಂಡ ಸಂಹಿತೆಯ ಕಲಂ ೪೮೯ (ಡಿ)ರನ್ವಯ ಗುನ್ನೆ ನಂ. ೧೫೨/೮೬ ಅನ್ನು ದಾಖಲು ಮಾಡಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಟಿ ಆರ್ಮುಗಂ, ಸುರಿಯಪ್ಪನ್ ಅಲಿಯಾಸ್ ಮರಿ, ಪಿ. ಶೇಖರ್ ಮತ್ತು ಪಿ. ರಮೇಶ್ ಎಂಬುವರನ್ನು ಬಂಧಿಸಲಾಗಿದೆ. ಶಿವಕಾಸಿಯ ರಾಮಕೃಷ್ಣ, ಶಾಕರ್, ಶೇಖರ್ ಮತ್ತು ಕೃಷ್ಣ ಅವರನ್ನು ಹುಡುಕಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ. ಈ ಪ್ರಕರಣವನ್ನು ತನಿಖೆಗಾಗಿ ಸಿ.ಒ.ಡಿ.ಗೆ ವಹಿಸಲಾಗಿದೆ.

ಈ) ಈ ಪ್ರಕರಣವನ್ನು ಸಿ.ಒ.ಡಿ. ತನಿಖೆ ಮಾಡುತ್ತಿರುವುದರಿಂದ ಸಿ.ಬಿ.ಐ.ಗೆ ವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ.ಎಸ್. ಮಣಿ.—ಬೆಂಗಳೂರಿನಲ್ಲಿ ಈ ತರಹದ ಕೇಸು ಬಂದಿದೆ. ಹುಬ್ಬಳ್ಳಿಯಲ್ಲಿ ಬಂದಿದೆ. ಕೆ.ಜಿ.ಎಫ್‌ನಲ್ಲೂ ಕೂಡ ಬಂದಿದೆ. ಸಿ.ಓ.ಡಿ.ಯವರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಇದರಿಂದ ಅರ್ಥವಾಗುತ್ತದೆ. ಆದ್ದರಿಂದ ಇದನ್ನು ಸಿ.ಬಿ.ಐ.ಗೆ ಒಪ್ಪಿಸಿದರೆ ನಿಜವಾದ ಫ್ಯಾಕ್ಟ್ಸ್ ಹೊರಗೆ ಬರಬಹುದು ಎಂಬ ಉದ್ದೇಶದಿಂದ ಕೇಳುತ್ತಿದ್ದೇನೆ. ಇದನ್ನು ಸರ್ಕಾರ ಕನ್ಸಿಡರ್ ಮಾಡುತ್ತದೆಯೇ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಈಗ ಕೇಳಿರುವ ಪ್ರಶ್ನೆ ಕೆ.ಜಿ.ಎಫ್.ಗೆ ಸಂಬಂಧಪಟ್ಟಿದ್ದು. ನಮ್ಮ ಅಧಿಕಾರಿಗಳು ಇನಿಷ್ಟಿಯೇಷನ್ ತೆಗೆದುಕೊಂಡು ಅದನ್ನು ಕಂಡು ಹಿಡಿದಿದ್ದಾರೆ. ನಾಸಿಕ್‌ಗೆ ಹೋಗಿ ಕೌಂಟರ್‌ಫೀಟ್ ಕರೆನ್ಸಿಯ ಮುದ್ರಣವನ್ನು ಕಂಡು ಹಿಡಿಯುವ ವಿಷಯದಲ್ಲಿ ತರಬೇತಿಯನ್ನು ಪಡೆದುಕೊಂಡು ಬಂದಿದ್ದಾರೆ ಆ ಕ್ರೆಡಿಟ್ ನಮಗೆ ಬರಬೇಕಾಗುತ್ತದೆ. ನಮ್ಮ ಪಕ್ಕದ ರಾಜ್ಯವಾಗಿರತಕ್ಕ ತಮಿಳುನಾಡಿನಲ್ಲಿರತಕ್ಕ ಅಧಿಕಾರಿಗಳು ಇವರಿಗೆ ಸಹಾಯ ಮಾಡಿರುವುದರಿಂದ ಈ ಕೇಸನ್ನು ಸಿ.ಬಿ.ಐ.ಗೆ ಒಪ್ಪಿಸುವಂತಹ ಅವಕಾಶ ಇಲ್ಲ. ಆದರೆ ಸಿ.ಬಿ.ಐ.ನವರು ಸುಮ್ಮೋ ಮೋಟೋ ಎಲ್ಲಿ ಬೇಕಾದರೂ ಇಂಥವರನ್ನು ಹಿಡಿಯಬಹುದು.

ಶ್ರೀ ಆರ್, ವೆಂಕಟರಾಮಯ್ಯ.—ಶ್ರೀಮಾನ್ ನಾರಾಯಣ್‌ಕುಮಾರ್‌ರವರು ಶ್ರೀಮಾನ್ ಬಸವಲಿಂಗಪ್ಪನವರನ್ನು †ಏನನ್ನುವ ಮಾತನ್ನು ಹೇಳಿದರು. ಅದು ಕಡತದಲ್ಲಿ ಹೋಗಿದೆ. ಆ ಪದವನ್ನು ಕಡತದಿಂದ ತೆಗೆದುಹಾಕಬೇಕು.

ಅಧ್ಯಕ್ಷರು.—ಆಯಿತು ನೋಡುತ್ತೇನೆ.

† ಅಧ್ಯಕ್ಷರ ಅನುಮತಿಯಂತೆ ತೆಗೆದುಹಾಕಲಾಗಿದೆ.

ರಾಜ್ಯದಲ್ಲಿ ನಡೆದ ದರೋಡೆ ಹಾಗೂ ಕಳ್ಳತನಗಳು

ಸಂಖ್ಯೆ ೧೪೪ (೪೭ ಬಿ) ಶ್ರೀ ಗೋಪಾಲ ಮುಕುಂದ ಕಾನಡೆ(ಸಿಸಿ).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ನಡೆದ ದರೋಡೆ ಹಾಗೂ ಲೂಟಿ ಅಪಹರಣಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಎಷ್ಟು ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಇ) ದರೋಡೆಯಿಂದ ಹಾನಿ ಹಾಗೂ ನಷ್ಟ ಹೊಂದಿದವರಿಗೆ ನೀಡಿದ ಪರಿಹಾರವೇನು ?

ಈ) ಎಷ್ಟು ಮಂದಿ ದರೋಡೆಕೋರರನ್ನು ಹಿಡಿದು ಶಿಕ್ಷೆ ವಿಧಿಸಲಾಗಿದೆ ಹಾಗೂ ದರೋಡೆ ಲೂಟಿತನಗಳನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?